# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 28(257) |
| ಉತ್ತರಿಸಬೇಕಾದ ದಿನಾಂಕ | 16.07.2024 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಸ್ಥಳೀಯ ಯೋಜನೆ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಹೆಚ್ಚುವರಿಯಾಗಿ 11 ಗ್ರಾಮಗಳನ್ನು ಸೇರಿಸಿ ದಿನಾಂಕ:15.02.2016ರಲ್ಲಿ ಸೇರಿಸಿ ವಿಸ್ತರಿಸಿದ್ದು, ಈ ಗ್ರಾಮಗಳ ಅಭಿವೃದ್ಧಿ ಕಾರ್ಯಗಳನ್ನು ಸ್ಥಗಿತಗೊಳಿಸಿ ಈ ಪ್ರದೇಶಕ್ಕೆ ಮಹಾ ಯೋಜನೆಯನ್ನು ಸಿದ್ಧಪಡಿಸುವಂತೆ ಆದೇಶಿಸಿದ್ದರೂ ಇಲ್ಲಿಯವರೆಗೂ ಸಿದ್ಧಪಡಿಸದೇ ಇರಲು ಕಾರಣವೇನು; | ಕಲಬುರಗಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಅಡಿಯಲ್ಲಿ ಹೆಚ್ಚುವರಿಯಾಗಿ 11 ಗ್ರಾಮಗಳನ್ನು ದಿನಾಂಕ15-02-2016 ರಲ್ಲಿ ಸೇರಿಸಿ ವಿಸ್ತರಿಸಿ ಆದೇಶಿಸಲಾಗಿದ್ದು, ಸದರಿ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ (ಪ-III) ಯನ್ನು ತಯಾರಿಸಲು ಪ್ರಕ್ರಿಯೆಯನ್ನು ಪ್ರಾರಂಭಿಸಿ ದತ್ತಾಂಶ ಸಂಗ್ರಹಿಸಲು ಎಲ್ಲಾ ಸರ್ಕಾರಿ ಇಲಾಖೆಗಳ, ಖಾಸಗಿ ಸಂಸ್ಥೆಗಳಿಂದ ದತ್ತಾಂಶ ಸಂಗ್ರಹಿಸಲು ಕ್ರಮ ಜರುಗಿಸಲಾಗಿರುತ್ತದೆ. ಇದೇ ಹಂತದಲ್ಲಿ ದಿನಾಂಕ:18-07-2018 ರಂತೆ ಅಮೃತ್ ಯೋಜನೆಯಡಿಯಲ್ಲಿ ನಗರ/ಪಟ್ಟಣಗಳಿಗೆ Formulation of GIS Master Plan ಯಡಿಯಲ್ಲಿ ಮಹಾಯೋಜನೆ ತಯಾರಿಸುವ ಸಂಬಂಧ ಕೇಂದ್ರ ಸರ್ಕಾರದ ಅನುದಾನದಿಂದ ಅನುಷ್ಠಾನಗೊಳಿಸಲು ನಿರ್ಣಯಿಸಿ ಹಾಗೂ ಮಹಾನಗರದ ಮೂಲ ನಕ್ಷೆಯನ್ನು KSRSAC ರವರಿಂದ AMRUT Design & Standard (GIS ತಂತ್ರಾಂಶದಲ್ಲಿ) ಅನುಸಾರ ತಯಾರಿಸಿ ನೀಡಲು ದಿನಾಂಕ:21-01-2020 ರಂತೆ ಮೆ: DDF Consultants, Delhi ಇವರಿಗೆ ಮಹಾಯೋಜನೆ ಕೆಲಸವನ್ನು ವಹಿಸಲಾಗಿರುತ್ತದೆ.<br><br>ಈ ಮಧ್ಯೆ ಕೋವಿಡ್-19 ಸಾಂಕ್ರಾಮಿಕ ರೋಗದ ನಿಮಿತ್ಯ ಹಾಗೂ ಸಿಬ್ಬಂದಿ ಕೊರತೆಯಿಂದ ಮಹಾಯೋಜನೆ ತಯಾರಿಸುವ ಕಾರ್ಯ ಪ್ರಗತಿಯಲ್ಲಿ ಕುಂಠಿತಗೊಂಡಿರುತ್ತದೆ ಹಾಗೂ ದಿನಾಂಕ:13-11-2022 ರಲ್ಲಿ ಮೆ: DDF Consultants, Delhi ಇವರು ಮಹಾಯೋಜನೆ ಕೆಲಸದಿಂದ ಹಿಂದೆ ಸರಿಯುತ್ತಿರುವುದಾಗಿ ತಿಳಿಸಿದ್ದು, ಈ ಕುರಿತು ದಿನಾಂಕ:05-07-2022 ರಂದು ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ |

| | | |
|---|---|---|
| | | ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೆ: DDF Consultants, Delhi ಇವರಿಗೆ ಮಹಾಯೋಜನೆ ಕೆಲಸವನ್ನು ಪುನಃ ಪ್ರಾರಂಭಿಸಲು ಸೂಚಿಸಿದ್ದು, ಅದರಂತೆ ಮಹಾಯೋಜನೆ ಕೆಲಸವನ್ನು ಪುನಃ ಪ್ರಾರಂಭಿಸಿರುತ್ತಾರೆ. ಆದರೆ, ಕರಾರು ಒಪ್ಪಂದದಂತೆ ಮೆ: DDF Consultants, Delhi ಇವರು ಮಹಾಯೋಜನೆ ಸಿದ್ದಪಡಿಸಲು ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸದೇ ಇರುವುದರಿಂದ ಮಹಾಯೋಜನೆ ಕಾರ್ಯ ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ. |
| ಆ) | ಈ 11 ಗ್ರಾಮಗಳ ಮಹಾ ಯೋಜನೆಯ ವಿಳಂಬದಿಂದಾಗಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಕಲಬುರಗಿ ನಗರದ ಮಹಾಯೋಜನೆ ಕಾರ್ಯ ಸಿದ್ದಪಡಿಸಲು ವಿಳಂಬವಾಗುತ್ತಿರುವುದರಿಂದ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶಕ್ಕೆ ಒಳಗೊಂಡಿರುವ ಈ ಕೆಳಕಂಡ 11 ಗ್ರಾಮಗಳ ಮಹಾ ಯೋಜನೆಯ ವಿಳಂಬದಿಂದಾಗಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>1. ಕಣದಾಳ 2. ಶ್ರೀನಿವಾಸ ಸರಡಗಿ 3. ಕೆರ ಭೋಸಗಾ 4. ತಾವರಗೇರಾ 5. ಸೈಯ್ಯದ ಚಿಂಚೋಳಿ 6. ಪಾಣೆಗಾಂವ 7. ಖಾಜಾ ಕೋಟನೂರ 8. ನಂದೂರ 'ಕೆ' 9. ಅವರಾಧ-ಬಿ 10. ಗಣಜಲಖೇಡ 11. ಸಿರನೂರು.<br><br>ಕಲಬುರಗಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 251 ಗುಅಪ್ರಾ 2015, ದಿನಾಂಕ:15.02.2016 ರಲ್ಲಿ ವಿಸ್ತೃತ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿ ಹೊರಡಿಸುವ ಆದೇಶದಲ್ಲಿ ಸದರಿ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಪ್ರದೇಶವನ್ನು ವ್ಯವಸಾಯ ವಲಯವೆಂದು ಪರಿಗಣಿಸಿ ವಲಯನಿಯಮಾವಳಿಗಳಿಗೆ ಅನುಸಾರವಾಗಿ ಅನುಮೋದನೆ ನೀಡಲು ಆದೇಶ ಹೊರಡಿಸಲಾಗಿರುತ್ತದೆ (ಅನುಬಂಧ).<br><br>ಸರ್ಕಾರದಿಂದ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿ ಹೊರಡಿಸಿರುವ ಆದೇಶಗಳಲ್ಲಿ ವ್ಯಾಪ್ತಿಯ ಪ್ರದೇಶವನ್ನು ವ್ಯವಸಾಯ ವಲಯವೆಂದು ಆದೇಶಿಸಲಾಗಿರುವುದಿಲ್ಲ.<br><br>ಕೆಲವೊಂದು ಪ್ರಕರಣಗಳಲ್ಲಿ ವ್ಯವಸಾಯ ವಲಯವೆಂದು ಪರಿಗಣಿಸಿರುವ ಪ್ರದೇಶಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರಡಿ ಭೂ ಉಪಯೋಗ |

| | | |
|---|---|---|
| | | ಬದಲಾವಣೆ ಪ್ರಸ್ತಾವನೆಗಳನ್ನು ಸಲ್ಲಿಸಬಾರದೆಂದು ನಿರ್ಬಂಧವನ್ನು ವಿಧಿಸಲಾಗಿರುತ್ತದೆ.<br><br>ಸದರಿ ಅಂಶಗಳನ್ನು ಪರಿಶೀಲಿಸಿ, ರಾಜ್ಯದಲ್ಲಿನ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶಗಳಿಗೆ ಏಕರೂಪದ ನಿರ್ದೇಶನ ನೀಡುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| ಇ) | ಮಹಾ ಯೋಜನೆಯ ಅಭಿವೃದ್ಧಿ ಯೋಜನೆಯ ವಿಳಂಬದಿಂದಾಗಿ ಸರ್ಕಾರಕ್ಕೆ ಆಗುತ್ತಿರುವ ನಷ್ಟವೆಷ್ಟು; | ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಅನುಮೋದಿತ ವಲಯ ನಿಯಮಾವಳಿಗಳ ಅವಕಾಶದಂತೆ ಕೃಷಿ ವಲಯದಲ್ಲಿ ಅನುಮತಿಸಬಹುದಾದ ಅಭಿವೃದ್ಧಿ ಕಾರ್ಯಗಳಿಗೆ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗುತ್ತಿದೆ ಹಾಗೂ ಪ್ರಸ್ತುತ ಮಹಾಯೋಜನೆ ಮೂಲ ನಕ್ಷೆಯನ್ನು ತಯಾರಿಸುವ ಕಾರ್ಯವು ಪೂರ್ಣಗೊಂಡಿದ್ದು, ಹಾಲಿ ಭೂ ಉಪಯೋಗ ನಕ್ಷೆಯನ್ನು ಸಿದ್ಧಪಡಿಸಲಾಗಿರುತ್ತದೆ. ಮಹಾಯೋಜನೆಗೆ ಸಂಬಂಧಿಸಿದ ಅಧ್ಯಯನ ನಕ್ಷೆಗಳು ಹಾಗೂ concept plan ನ್ನು ತಯಾರಿಸಲಾಗಿದೆ. ಮಹಾಯೋಜನೆ (ಪ-iii) ರ ಕಾರ್ಯವು ಪ್ರಗತಿಯಲ್ಲಿದ್ದು, September 2024 ರ ಅಂತ್ಯದೊಳಗಾಗಿ ತಾತ್ಕಾಲಿಕ ಮಹಾಯೋಜನೆ ಕಾರ್ಯ ಪೂರ್ಣಗೊಳಿಸಲಾಗುವುದು. |
| ಈ) | ಯಾವ ಕಾಲಮಿತಿಯಲ್ಲಿ ಸದರಿ ಗ್ರಾಮಗಳಿಗೆ ಮಹಾ ಯೋಜನೆಯನ್ನು ಸಿದ್ಧಪಡಿಸಿ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು? (ವಿವರ ನೀಡುವುದು) | |

ಸಂಖ್ಯೆ : ನಅಇ 42 ಎಲ್‌ಸಿಕ್ಯೂ 2024

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು

## ಕರ್ನಾಟಕ ಸರ್ಕಾರದ ನಡವಳಿಗಳು

ಸಂಖ್ಯೆ: ನಅಇ 251 ಗುಅಪ್ರಾ 2015

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 15.02.2016.

### ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ವನಇ 437 ಟಟಿಪಿ 88 (II), ದಿನಾಂಕ 25.04.1989 ರನ್ವಯ ಘೋಷಿಸಲಾಗಿರುವ ಕಲಬುರಗಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4(ಎ)(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ಸರ್ಕಾರವು ದಿನಾಂಕ 15.02.2016 ರಿಂದ ಜಾರಿಗೆ ಬರುವಂತೆ ಹೆಚ್ಚುವರಿಯಾಗಿ 11 ಗ್ರಾಮಗಳನ್ನು ಸೇರಿಸಿ ಹಾಲಿ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಲಾಗಿದೆ. ಪರಿಷ್ಕೃತ ಕಲಬುರಗಿ ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಪಟ್ಟಣ ಹಾಗೂ ಗ್ರಾಮಗಳನ್ನು ಒಳಗೊಂಡ ಸ್ಥಳೀಯ ಯೋಜನಾ ಪ್ರದೇಶದ ವಿವರಗಳನ್ನು ಅನುಬಂಧ-1 ರಲ್ಲಿ ಹಾಗೂ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಣೆಗಳನ್ನು ಅನುಬಂಧ-2 ರಲ್ಲಿ ನಮೂದಿಸಲಾಗಿದೆ.

ಸದರಿ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶವನ್ನು ವ್ಯವಸಾಯ ವಲಯವೆಂದು ಪರಿಗಣಿಸಲು ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4(ಎ)(4) ರಲ್ಲಿನ ಅವಕಾಶದನ್ವಯ ಈಗಾಗಲೇ ವಿಸ್ತರಿತ ಪ್ರದೇಶದಲ್ಲಿ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ನೀಡಿರುವ ಪ್ರಕರಣಗಳನ್ನು ಸಂರಕ್ಷಿಸಿ ಚಾಲ್ತಿಯಲ್ಲಿರುವ ವಲಯ ನಿಯಮಾವಳಿಗಳನ್ನು ಮಹಾಯೋಜನೆಯನ್ನು ಪರಿಷ್ಕರಿಸಿ ಅನುಮೋದನೆ ಪಡೆಯುವವರೆಗೂ ಅಳವಡಿಸಬಹುದಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:



enerated from eOffice by RAMESH C.M, UDD-DAU-SA-ING(RCM), SENIOR ASSISTANT, Urban Development Department on 15/07/2024 11:27 AM

# ಅನುಬಂಧ-1

## ಕಲಬುರಗಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಳಗೊಂಡಿರುವ ಗ್ರಾಮಗಳ ವಿವರ:

| ಕ್ರ.ಸಂ. | ಗ್ರಾಮದ ಹೆಸರು | ಸೇರಿಸಿರುವ ಪ್ರದೇಶ |
|---|---|---|
| 01. | ಕಲಬುರಗಿ ನಗರ | ಮಹಾನಗರ ಪಾಲಿಕೆ ಎಲ್ಲೆಯೊಳಗಿರುವ ಪೂರ್ಣ ಪ್ರದೇಶ |
| 02. | ಬ್ರಹ್ಮಪೂರ | ಗ್ರಾಮ ಠಾಣಾ ಸೇರಿದಂತೆ ಕಂದಾಯ ಪೂರ್ತಿ ಗ್ರಾಮ |
| 03. | ನಿಜಾಮಪೂರ | -ಡಿಟೋ- |
| 04. | ರಾಜಾಪೂರ | -ಡಿಟೋ- |
| 05. | ದದ್ದಾಪೂರ | -ಡಿಟೋ- |
| 06. | ಧರಿಯಾಪೂರ | -ಡಿಟೋ- |
| 07. | ವಕ್ಕಲಗೇರಾ | -ಡಿಟೋ- |
| 08. | ಬಿದ್ದಾಪೂರ | -ಡಿಟೋ- |
| 09. | ಹೀರಾಪೂರ | -ಡಿಟೋ- |
| 10. | ಮಾಳೇವಾಡಿ | -ಡಿಟೋ- |
| 11. | ಶೇಖರೋಜಾ | -ಡಿಟೋ- |
| 12. | ಬಡೇಪೂರ | -ಡಿಟೋ- |
| 13. | ಕಪನೂರ | -ಡಿಟೋ- |
| 14. | ನಾಗನಹಳ್ಳಿ | -ಡಿಟೋ- |
| 15. | ಉದನೂರ | -ಡಿಟೋ- |
| 16. | ಮಾದರಸನಹಳ್ಳಿ | -ಡಿಟೋ- |
| 17. | ಕೋಟನೂರ | -ಡಿಟೋ- |
| 18. | ಜಾಫರಾಬಾದ | -ಡಿಟೋ- |
| 19. | ಪಲ್ಲಾಪೂರ | -ಡಿಟೋ- |
| 20. | ಸುಲ್ತಾನಪೂರ | -ಡಿಟೋ- |
| 21. | ಕುಸನೂರ | -ಡಿಟೋ- |
| 22. | ಕಾಳಗಾನೂರ | -ಡಿಟೋ- |
| 23. | ಆಜಾಧಪೂರ | -ಡಿಟೋ- |
| 24. | ಹಾಗರಗಾ | -ಡಿಟೋ- |
| 25. | ಮಾಲಗತ್ತಿ | -ಡಿಟೋ- |
| 26. | ಉಪಳಾಂವ | -ಡಿಟೋ- |
| 27. | ಕೆಸರಟಗಿ | -ಡಿಟೋ- |
| 28. | ಬೇಲೂರ (ಜೆ) | -ಡಿಟೋ- |



Generated from eOffice by RAMESH C.M, UDD-DAU-SA-ING(RCM), SENIOR ASSISTANT, Urban Development Department on 15/07/2024 11:27 AM

| | | |
|---|---|---|
| 29. | ಸಿಂದಗಿ | -ಡಿಟ್ಟೋ- |
| 30. | ಬಬಲಾದ | -ಡಿಟ್ಟೋ- |
| 31. | ಸಿರಸಗಿ | -ಡಿಟ್ಟೋ- |
| 32. | ಸೀತನೂರ | -ಡಿಟ್ಟೋ- |
| 33. | ನಂದಿಕೂರ | -ಡಿಟ್ಟೋ- |
| ಕಲಬುರಗಿ ನಗರ ಯೋಜನಾ ಪ್ರದೇಶಕ್ಕೆ ಹೊಸದಾಗಿ ಸೇರ್ಪಡೆ ಮಾಡಿದ ಗ್ರಾಮಗಳ ಹೆಸರುಗಳು | | |
| 34. | ಖಣದಾಳ | -ಡಿಟ್ಟೋ- |
| 35. | ಶ್ರೀನಿವಾಸ ಸರಡಗಿ | -ಡಿಟ್ಟೋ- |
| 36. | ಕೆರೆ ಭೋಸಗಾ | -ಡಿಟ್ಟೋ- |
| 37. | ತಾವರಗೇರಾ | -ಡಿಟ್ಟೋ- |
| 38. | ಸೈಯ್ಯದ ಚಿಂಚೋಳಿ | -ಡಿಟ್ಟೋ- |
| 39. | ಪಾಣೆಗಾಂವ | -ಡಿಟ್ಟೋ- |
| 40. | ಖಾಜ್ಞಾ ಕೋಟನೂರ | -ಡಿಟ್ಟೋ- |
| 41. | ನಂದೂರ 'ಕೆ' | -ಡಿಟ್ಟೋ- |
| 42. | ಅವರಾಧ-ಬಿ | -ಡಿಟ್ಟೋ- |
| 43. | ಗಣಜಲಖೇಡ | -ಡಿಟ್ಟೋ- |
| 44. | ಸಿರನೂರು | -ಡಿಟ್ಟೋ- |

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.



…ted from eOffice by RAMESH C.M, UDD-DAU-SA-ING(RCM), SENIOR ASSISTANT, Urban Development Department on 15/07/2024 11:37 AM